**DAC – 550**

## ತೃತೀಯ ಬಿ.ಎ. ಪದವಿ ಪರೀಕ್ಷೆ, ಆಗಸ್ಟ್/ಸೆಪ್ಟೆಂಬರ್ 2008
## ಅಂಚೆ ಮತ್ತು ತೆರಪಿನ ಶಿಕ್ಷಣ
## ಪತ್ರಿಕೆ – 5 : ಬಸವ ತತ್ವ
## ಶರಣರ ಆಂದೋಲನ ಹಾಗೂ ಹೊಸ ಸಮಾಜದ ಪರಿಕಲ್ಪನೆ

ಅವಧಿ : 3 ಗಂಟೆಗಳು　　　　　　　　　　　　　　　　　　　　ಗರಿಷ್ಠಾಂಕಗಳು : 70

1. ಯಾವುದಾದರೂ ಎರಡು ವಚನಗಳನ್ನು ವಿಶ್ಲೇಷಿಸಿ : **(2×5=10)**

ಅ) ದೇವಸಹಿತ ಭಕ್ತ ಮನೆಗೆ ಬಂದರೆ
ಕಾಯಕವಾವುದೆಂದು ಬೆಸಗೊಂಡರೆ
ನಿಮ್ಮಾಣೆ ನಿಮ್ಮ ಪುರಾತರ ಆಣೆ! ತಲೆದಂಡ! ತಲೆದಂಡ
ಕೂಡಲಸಂಗಮದೇವ ಭಕ್ತರ ಕುಲವನರಸಿದರೆ
ನಿಮ್ಮ ರಾಣಿವಾಸದಾಣೆ

ಆ) ಭಕ್ತರ ಕಂಡರೆ ಬೋಳಪ್ಪರಯ್ಯ
ಸವಣರ ಕಂಡರೆ ಬತ್ತಲೆಯಪ್ಪರಯ್ಯ
ಹಾರುವರ ಕಂಡರೆ ಹರಿನಾಮಹಂಬರಯ್ಯ
ಅವರವರ ಕಂಡರೆ ಅವರವರಂತೆ
ಸೂಳೆಗೆ ಹುಟ್ಟಿದವರ ತೊರೆದಿರಯ್ಯಾ
ಕೂಡಲಸಂಗಮದೇವನ ಪೂಜಿಸಿ ಅನ್ಯದೇವಂಗಳಿಗೆ

ಇ) ಖ್ಯಾತಿಯ ಲಾಭಕ್ಕೆ ಮಾಡುವಾತ ಭಕ್ತನಲ್ಲ
ಡಂಬಕ್ಕೆ ಡೊಂಬರಂತೆ ತಿರುಗುವವ ಜಂಗಮವಲ್ಲ
ತನು ತಲೆ ಬತ್ತಲೆಯಾಗಿ ಮನತ್ರಿವಿಧದ ಆಸೆ ಉಳ್ಳನಕ್ಕ ವಿರಕ್ತನಲ್ಲ
ಇಂತಿ ಗುಣವ ಸಂಪಾದಿಸುವನ್ನಕ್ಕ ಎನಗೆ ಮುಕ್ತಿಯೆಂಬ ಬಟ್ಟೆಯಿಲ್ಲ
ನೀ ಸತ್ತೆ ನಾ ಕೆಟ್ಟೆ, ಮನಸಂದಿತ್ತು ಮಾರೇಶ್ವರಾ.

AUGUST SEPTEMBER EXAM 2008

2. ಯಾವುದಾದರೂ ನಾಲ್ಕಕ್ಕೆ ಉತ್ತರಿಸಿ : **(4×10=40)**

ಅ) ಆಂದೋಲನ ಎಂದರೇನು ? ಜಗತ್ತಿನ ಆಂದೋಲನಗಳ ಮುಖ್ಯ ಲಕ್ಷಣಗಳನ್ನು ವಿವರಿಸಿ.

ಆ) ಜಾತಿ ವಿರುದ್ಧದ ಶರಣರ ಆಂದೋಲನವನ್ನು ವಿವರಿಸಿ.

**P.T.O.**

ಇ) ವೇದಗಳ ಕರ್ಮದ ವಿರುದ್ಧ ಶರಣರು ಯಾವ ನೆಲೆಯಲ್ಲಿ ಆಂದೋಲನವನ್ನು ನಡೆಸಿದರು ? ವಿವರಿಸಿ.

ಇ) ಶರಣರ ಆಂದೋಲನದ ಏಕದೈವ ಉಪಾಸನೆಯ ಬಗ್ಗೆ ಬರೆಯಿರಿ.

ಉ) ಸಮಾಜ ಎಂದರೇನು ? ಹೊಸ ಸಮಾಜವನ್ನು ಕಟ್ಟಲು ಶರಣರು ಏಕೆ ಬಯಸಿದರು ? ಪ್ಲೇಟೋವಿನ ಆದರ್ಶ ಸಮಾಜದ ಪರಿಕಲ್ಪನೆಯೊಂದಿಗೆ ವಿವರಿಸಿ.

3. ಯಾವುದಾದರೂ ನಾಲ್ಕಕ್ಕೆ ಉತ್ತರಿಸಿ : (4×5=20)

ಅ) ಮಹಾವೀರ ಮಾಡಿದ ಆಂದೋಲನ

ಆ) ಶರಣರ ಪರಿಕಲ್ಪನೆಯಲ್ಲಿ ಜಾತಿ

ಇ) ಚೌಡಯ್ಯನ ಪರಿಕಲ್ಪನೆಯ ಭಕ್ತ

ಈ) ಹೊಸ ಸಮಾಜ 'ಧರ್ಮ'.

